ಈ. ಸ್ವಂತ ಉದ್ಯೋಗ ಯೋಜನೆ ಅಡಿಯಲ್ಲಿ ವಾಹನ ಕೊಳ್ಳುವವರಿಗೆ ಅಬ್ಕಾರಿ ಶುಲ್ಕ ವಿನಾಯಿತಿ ಹಾಗೂ ಕಡಿಮೆ ಬಡ್ಡಿ ದರ ಕೊಡಲಾಗುವುದೇ;

ಉ. ಅಂತೆಯೇ ಟ್ರಾಕ್ಟರ್ ಹಾಗೂ ಇತರೆ ಕೃಷಿ ಉಪಕರಣಗಳಿಗೆ ವಿನಾಯಿತಿ ಕೊಡಲಾಗುವುದೇ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಹೌದು. ಸಣ್ಣ ಮತ್ತು ಅತಿ ಸಣ್ಣ ರೈತರು ರೂ. 15,000–00 ಗಳವರೆಗೆ ಪಡೆಯುವ ಸಾಲಕ್ಕೆ ಮುದ್ರಾಂಕ ಶುಲ್ಕ ಈಗ ವಿನಾಯ್ತಿ ಇದೆ. ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ರೈತರು ಪಡೆಯುವ ರೂ. 25,000–00 ವರೆಗಿನ ಸಾಲಕ್ಕೆ ಮುದ್ರಾಂಕ ಶುಲ್ಕ ವಿನಾಯ್ತಿ ಇದೆ.

ಇಲ್ಲಾ, ಏಕೆಂದರೆ ಯಾರು ಸ್ಥಿರಾಸ್ತಿಗಳನ್ನು ನೋಂದಣಿ ಮಾಡಿಸಿದರೂ ಮುದ್ರಾಂಕ ಶುಲ್ಕವನ್ನು ಕೊಡಬೇಕಾಗುತ್ತದೆ.

ಇ. ಹೌದು.

ಈ. ಪ್ರಶ್ನೆ ಕಂದಾಯ ಇಲಾಖೆಗೆ ಸಂಬಂಧಿಸಿರುವುದಿಲ್ಲ.

ಉ. ಇಲ್ಲಾ

ಚಿಕ್ಕನಾಯಕನಹಳ್ಳಿ ಕಂಬಳಿ ನೇಕಾರರ ಸಂಘದ ಪುನಃಶ್ಚೇತನ

(1708): ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):– ಮಾನ್ಯ ಜವಳಿ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಚಿಕ್ಕನಾಯ್ಕನಹಳ್ಳಿಯಲ್ಲಿ ಕಂಬಳಿ ತಯಾರಿಕೆಗಾಗಿ ಒಂದು ಸಹಕಾರ ಸಂಘ ಇದ್ದುದು ಹಾಗೂ ಈಗ ಅದು ಸ್ಥಗಿತವಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ. ಹಾಗಿದ್ದಲ್ಲಿ ಅದನ್ನು ಪುನಶ್ಚೇತನಗೊಳಿಸಲು ಸರ್ಕಾರವು ಆಲೋಚಿಸಿದೆಯೇ; ಹಾಗಿಲ್ಲವಾದಲ್ಲಿ ಆ ಸಂಸ್ಥೆಯನ್ನು ಅವಲಂಬಿಸಿದ್ದ ನೇಕಾರ ಸಂಖ್ಯೆ ಎಷ್ಟು; ಅವರಿಗೆ ಉಣ್ಣೆ ಸರಬರಾಜು ಮಾಡಲು ಮಾಡಿರುವ ಬೇರೆ ವ್ಯವಸ್ಥೆ ಯಾವುದು;

ಇ. ಹಾಗಿಲ್ಲದಿದ್ದಲ್ಲಿ ಅವರಿಗೆ ಇದರಿಂದಾದ ನಷ್ಟ ತುಂಬಿಸಲು ಬೇರೆ ಉದ್ಯೋಗ ಕಲ್ಪಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎಚ್.ಕೆ. ಪಾಟೀಲ್ (ಜವಳಿ ಖಾತೆ ರಾಜ್ಯ ಸಚಿವರು):–

ಅ. ಹೌದು

ಆ. ಸದರಿ ಸಂಘದ ಪುನಶ್ಚೇತನಕ್ಕೆ ಪ್ರಸ್ತಾವನೆ ಬಂದಿದ್ದು ಪರಿಶೀಲನೆಯಲ್ಲಿದೆ.

ಇ. ಉದ್ಭವಿಸುವುದಿಲ್ಲ.

ನ್ಯಾಷನಲ್ ಕೋ– ಆಪರೇಟಿವ್ ಬ್ಯಾಂಕಿನಲ್ಲಿ ನೇಮಕಾತಿ ಸಮಯದಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸುತ್ತಿರುವ ಬಗ್ಗೆ

(1948): ಶ್ರೀಮತಿ ಸುಮಾ ವಸಂತ (ವೀರಾಜಪೇಟೆ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ. ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ನೇಮಕಾತಿ ಸಮಯದಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಕಾರಣಗಳೇನು;

ಇ. 121 ಜನ ಅಧಿಕಾರಿ ಸಿಬ್ಬಂದಿ, ಜವಾನರು ಇರುವಲ್ಲಿ ಇಬ್ಬರು ಮಾತ್ರ ಪರಿಶಿಷ್ಟ ಜಾತಿ ವರ್ಗದ ನೌಕರರು ಇದ್ದಲ್ಲಿ, ನೇಮಕಾತಿ ಸಮಯದಲ್ಲಿ ಮೀಸಲಾತಿ ನಿಯಮಗಳನ್ನು ಅನುಸರಿಸದಿರುವ ಕಾರಣವೇನು;

ಈ. ಮೀಸಲಾತಿ ನಿಯಮದ ಅನುಪಾತವನ್ನು ಮುಂದೆ ನೇಮಕಾತಿ ಸಮಯದಲ್ಲಿ ಸರಿಪಡಿಸಲಾಗುವುದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):-

ಅ. ಮತ್ತು ಆ. ಬಂದಿದೆ. ಸರ್ಕಾರದಿಂದ ಬ್ಯಾಂಕು ಯಾವುದೇ ತರಹದ ಆರ್ಥಿಕ ನೆರವು ಪಡೆದಿರುವುದಿಲ್ಲ. ಕರ್ನಾಟಕ ಸಹಕಾರಿ ಕಾಯ್ದೆ ಕಲಂ 30 (ಬಿ) ರಂತೆ ನಿಬಂಧಕರು ಹೊರಡಿಸಿದ ಆದೇಶದನ್ವಯ ಸರ್ಕಾರದಿಂದ ಆರ್ಥಿಕ ನೆರವು ಪಡೆದ ಸಂಘಗಳು ಕಡ್ಡಾಯವಾಗಿ ಮೀಸಲಾತಿ ಪಾಲಿಸಬೇಕಾಗಿರುತ್ತದೆ.

ಇ. ಪರಿಶೀಲಿಸಲಾಗುವುದು.

ರಾಜ್ಯದ ಕೃಷಿ ಉತ್ಪನ್ನದಲ್ಲಿ ಇಳಿಮುಖ

(1136): ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1991-92 ಮತ್ತು 1992-93ನೇ ಸಾಲಿನಲ್ಲಿ (1992 ಡಿಸೆಂಬರ್‌ವರೆಗೆ) ರಾಜ್ಯದಲ್ಲಿ ಉತ್ಪಾದಿಸಲಾದ ಸರಾಸರಿ ಕೃಷಿ ಉತ್ಪನ್ನ.

ಆ. ಹಿಂದಿನ ವರ್ಷಗಳಿಗೆ ಹೋಲಿಸಿದ್ದು, ಮೇಲ್ಕಾಣಿಸಿದ ಅವಧಿಯಲ್ಲಿ ರಾಜ್ಯದ ಕೃಷಿ ಉತ್ಪನ್ನದಲ್ಲಿ ಇಳಿಮುಖವಾಗಿದೆಯೇ;

ಇ. ಪ್ರತಿ ಹೆಕ್ಟೇರಿನಲ್ಲಿ ಕೃಷಿ ಬೆಳೆಗಳು ಮಂದವಾಗಿರುವುದನ್ನು ಸರ್ಕಾರವು ಗಮನಿಸಿದೆಯೇ;

ಈ. ಪ್ರತಿ ಹೆಕ್ಟೇರಿನಲ್ಲಿ ಇಳುವರಿಯನ್ನು ಹೆಚ್ಚಿಸಲು ಮಾರ್ಗೋಪಾಯಗಳನ್ನು ಸೂಚಿಸಲು ತಜ್ಞರ ಸಮಿತಿಯನ್ನು ರಚಿಸಲಾಗಿದೆಯೇ;

ಉ. ಹಾಗಿದ್ದಲ್ಲಿ ತಜ್ಞರ ಸಮಿತಿ ವರದಿಯನ್ನು ನೀಡಿದೆಯೇ;

ಊ. ವರದಿಯನ್ನು ಕೊಟ್ಟಿದ್ದಲ್ಲಿ ಅವರ ಶಿಫಾರಸ್ಸುಗಳ ವಿವರಗಳನ್ನು ಒದಗಿಸುವುದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):-

ಅ. 1991-92 ಮತ್ತು 1992-93ನೇ ಸಾಲಿನ (ಡಿಸೆಂಬರ್ 1992ರ ವರೆಗೆ) ರಾಜ್ಯದ ಕೃಷಿ ಉತ್ಪನ್ನಗಳು ಕೆಳಕಂಡಂತಿವೆ.

(ಉತ್ಪಾದನೆ ಲಕ್ಷ ಟನ್‌ಗಳಲ್ಲಿ)

ಕ್ರಮಸಂಖ್ಯೆ	ಬೆಳೆಗಳು	1991-92	1992-93 (ತಾತ್ಕಾಲಿಕ)